**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,**

**ಮಹದೇವಪುರ ವಲಯ, ಬೆಂಗಳೂರು – 560 113.**

ಕಿ.ಅ/ವಾರ್ಡ್–25/ಪಿ.ಆರ್/ /2022–23 ದಿನಾಂಕ:–13.07.2022

## "ಸಭಾ ಸೂಚನಾ ಪತ್ರ"

**ವಿಷಯ:–** ದಿನಾಂಕ:–16.07.2022 ಶನಿವಾರ ಬೆಳಗ್ಗೆ 11.30 ಗಂಟೆಗೆ ಹೊರಮಾವು ಉಪವಿಭಾಗ ವಾರ್ಡ್ ನಂ.25 ರ ಕಛೇರಿಯಲ್ಲಿ ನಡೆಯುವ ಸಭೆಗೆ ಹಾಜರಾಗುವ ಬಗ್ಗೆ.

**ಉಲ್ಲೇಖ:–**ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21, ದಿನಾಂಕ:21/09/2020.

***********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ...ಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ...ಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ...ಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿಗಳು ವಾರ್ಡ್ ನಂ.25 ರ ...ಮಾವು ಉಪವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳೊಂದಿಗೆ ದಿನಾಂಕ:–16.07.2022 ಶನಿವಾರ ಬೆಳಗ್ಗೆ 11.30 ಗಂಟೆಗೆ ವಾರ್ಡ್ ...ರ ಸ.ಕಾ.ಅ ಹೊರಮಾವು ಕಛೇರಿಗೆ ಹಾಜರಾಗಲು ಕೋರಲಾಗಿದೆ.

**ಸೂಚನೆ:–** Covid–19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ...ವನ್ನು ಕಾಯ್ದುಕೊಳ್ಳುವುದು.

13/7/2022

ಸಂಚಾಲಕರು
ಮತ್ತು ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್ ಸಂಖ್ಯೆ–25.

ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬಿಬಿಎಂಪಿ.
ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಮಹದೇವಪುರ ವಲಯ) ಬಿಬಿಎಂಪಿ.
ಕಾರ್ಯಪಾಲಕ ಅಭಿಯಂತರರು, ಬಿಡಬ್ಲೂಎಸ್ಎಸ್‌ಬಿ. ಸಿಎಂಸಿ
ಕಾರ್ಯಪಾಲಕ ಅಭಿಯಂತರರು, ಬಿಡಬ್ಲೂಎಸ್ಎಸ್‌ಬಿ. 110 ಹಳ್ಳಿಗಳ ವ್ಯಾಪ್ತಿ.
ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು ಬಿಬಿಎಂಪಿ.
ಕಾರ್ಯಪಾಲಯ ಅಭಿಯಂತರರು, ಕೆರೆಗಳ ವಿಭಾಗ, ಬಿಬಿಎಂಪಿ.
ಕಾರ್ಯಪಾಲಯ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿಬಿಎಂಪಿ.
ಆರೋಗ್ಯ ವೈಧ್ಯಾಧಿಕಾರಿಗಳು, ಕೆ.ಆರ್.ಪುರ.
ಸಹಾಯಕ ನಿರ್ದೇಶಕರು, ನಗರ ಯೋಜನೆ, ಮಹದೇವಪುರ ವಲಯ. ಬಿಬಿಎಂಪಿ.
ಡಾ//ಶಿವಕುಮಾರ್, ಆರೋಗ್ಯಾಧಿಕಾರಿಗಳು, ಕೆ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರ.
ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಕೆ.ಆರ್.ಪುರ.
ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪವಿಭಾಗ, ಬಿಬಿಎಂಪಿ.
ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಆರ್.ಟಿ.ನಗರ.
ಕಲ್ಯಾಣಾಧಿಕಾರಿಗಳು, ಮಹದೇವಪುರ ವಲಯ, ಬಿಬಿಎಂಪಿ.
ಪೊಲೀಸ್‌ಠಾಣೆ ಅಧಿಕಾರಿ ಹೆಣ್ಣೂರು/ಕೊತ್ತನೂರು/ರಾಮಮೂರ್ತಿನಗರ.
ಪೊಲೀಸ್ ಇನ್ಸ್‌ಪೆಕ್ಟರ್, ಲಾ ಅಂಡ್ ಆರ್ಡರ್ ರಾಮಮೂರ್ತಿನಗರ/ಕೊತ್ತನೂರು/ಹೆಣ್ಣೂರು ಪೊಲೀಸ್ ಠಾಣೆ. /ಟ್ರಾಫಿಕ್
ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರ ವಿಭಾಗ. ಬಾಣಸವಾಡಿ/ಕೆ.ಆರ್.ಪುರ.
ಕಛೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,**
**ಹೊರಮಾವು ಗ್ರಾಮ, ಬೆಂಗಳೂರು- 560113**

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2022-23 ದಿನಾಂಕ: 16.07.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-16. 07.2022 ರಂದು ಪೂರ್ವಾಹ್ನ 11.30 ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

<u>ಉಪಸ್ಥಿತರು:</u>

| ಕ್ರಸಂ | ಹೆಸರು | ಹುದ್ದೆ |
|---|---|---|
| | **ಅಧಿಕಾರಿಗಳು** | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ-ಆಯುಕ್ತರು (ಮಹದೇವಪುರ) |
| 2 | ಶ್ರೀ.ರಮೇಶ್ | ಕಿರಿಯ ಅಭಿಯಂತರರು |
| 3 | ಶ್ರೀ.ಸಂಜಯ್ ಕುಮಾರ್ | ಹಿರಿಯ ಆರೋಗ್ಯ ನಿರೀಕ್ಷಕರು |
| 4 | ಶ್ರೀ.ಹರೀಶ್ ಕುಮಾರ್.ಕೆ.ವಿ | ಕಿರಿಯ ಆರೋಗ್ಯ ನಿರೀಕ್ಷಕರು |
| 5 | ಶ್ರೀಮತಿ.ಚೈತ್ರ ವೆಂಕಟೇಶ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು(ಯೋಜನೆ) |
| 6 | ಶ್ರೀಮತಿ.ಶ್ರೀದೇವಿ | ವ್ಯವಸ್ಥಾಪಕರು |
| 7 | ಮಾರ್ಷಲ್ | ವಾರ್ಡ್ ನಂ.25 |
| | **ಸಾರ್ವಜನಿಕರು** | |
| 8 | ಶ್ರೀ. ಸ್ವಾಮಿ ನಾಯಕ್, ಶ್ರೀ.ಮಧುಸೂದನ್, ಶ್ರೀ.ಪ್ರವೀಣ್, ಶ್ರೀ.ಭಾಸ್ಕರ್ ರೆಡ್ಡಿ, ಶ್ರೀ.ತಿರುಮಲ ಪ್ರಸಾದ್ | ಹೊಯ್ಸಳನಗರ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:- |
| 9 | ಶ್ರೀ.ಮಗೇಶ್ ಮತ್ತು ಶ್ರೀ.ರತ್ನಂ ಗೌಡ. | ರೋಹಿಣಿ ಎನ್‌ಕ್ಲೇವ್ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್ |
| 10 | ಶ್ರೀ.ಬಾಲಾಜಿ ಪ್ರಸಾದ್. | ಜೆ.ಸಿ.ಬಡಾವಣೆ ಹೊರಮಾವು |

ಮು.ತಿ.ನೋ

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

<u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-</u>

<u>ಶ್ರೀ. ಸ್ವಾಮಿ ನಾಯರ್, ಶ್ರೀ.ಮಧುಸೂದನ್, ಶ್ರೀ.ಪ್ರವೀಣ್, ಶ್ರೀ.ಭಾಸ್ಕರ್ ರೆಡ್ಡಿ, ಶ್ರೀ.ತಿರುಮಲ ಪ್ರಸಾದ್ ಹೊಯ್ಸಳನಗರ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ಹೊಯ್ಸಳನಗರ 5ನೇ ಮುಖ್ಯರಸ್ತೆಯಲ್ಲಿ ಡಾಂಬರೀಕರಣ ಮಾಡಲು ಕೋರಿರುತ್ತಾರೆ. ಇದಕ್ಕೆ ವಾರ್ಡ್ ಅಭಿಯಂತರರು ಪ್ರತಿಕ್ರಿಯಿಸಿ ಮಳೆ ನಿಂತ ತಕ್ಷಣ ಡಾಂಬರು ಮಾಡಿಕೊಡಲಾಗುವುದು ಎಂದು ತಿಳಿಸಿರುತ್ತಾರೆ. ಮತ್ತು 5ನೇ ಮುಖ್ಯರಸ್ತೆಯಲ್ಲಿ ಒಂದು ಹೊಸ ಬೀದಿ ದೀಪ ಅಳವಡಿಸಲು ಕೋರಿಕೊಂಡಿರುತ್ತಾರೆ. 20ನೇ ಅಡ್ಡರಸ್ತೆಯಲ್ಲಿ ನೀರು ಸರಬರಾಜು ಸಂಪರ್ಕ ಕಲ್ಪಿಸಲು ಕೋರಿಕೊಂಡಿರುತ್ತಾರೆ.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಪ್ರಗೀಶ್ ಮತ್ತು ಶ್ರೀ.ರತ್ನಂ ಗೌಡ, ರೋಪಿಣಿ ಎನ್‌ಕ್ಲೇವ್ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡುತ್ತಾ, ಕಲ್ಯಾಣಿ ಮೋಟರ್ಸ್ ರವರು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದನ್ನು ತೆರವುಗೊಳಿಸಿಕೊಡಲು ಕೋರಿಕೊಂಡಿರುತ್ತಾರೆ.
<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಬಾಲಾಜಿ ಪ್ರಸಾದ್, ಜೆ.ಸಿ.ಬಡಾವಣೆ ಹೊರಮಾವು :-</u> ರವರು ಮಾತನಾಡುತ್ತಾ, ಜೆ.ಸಿ.ಬಡಾವಣೆಯಲ್ಲಿ ರಸ್ತೆಗಳಲ್ಲಿ ಚರಂಡಿ ನಿರ್ಮಿಸಿ ರಸ್ತೆ ಅಭಿವೃದ್ಧಿ ಪಡಿಸಿಕೊಡಲು ಕೋರಿಕೊಂಡಿರುತ್ತಾರೆ.
<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

- ಹೊಸ ವಾರ್ಡ್ ಸಂಖ್ಯೆ-82 ಬಾಬುಸಾಪಾಳ್ಯ ವಾರ್ಡ್ ವ್ಯಾಪ್ತಿಗೆ ಬರುವ ಭಾಗಶಃ ಹೊರಮಾವು ಗ್ರಾಮ ಬಾಬುಸಾಪಾಳ್ಯ ಗ್ರಾಮ ಚೆಳಕೆರೆ ಗ್ರಾಮ ಭಾಗಶಃ ಹೊರಮಾವು ಅಗರ ಗ್ರಾಮ ವ್ಯಾಪ್ತಿಗೆ ಬರುವ ಹಳ್ಳಿಗಳು ಹಾಗೂ ಬಡಾವಣೆಗಳ ವ್ಯಾಪ್ತಿಯಲ್ಲಿ ನೀರು ಸರಬರಾಜು ನಿರ್ವಹಣೆಯನ್ನು ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿದ್ದು, ನಿರ್ವಹಣಾ ಅವಧಿಯು 30.06.2022 ಕ್ಕೆ ಮುಕ್ತಾಯಗೊಂಡಿದ್ದು, ಹಾಲಿ ಕೊಳವೆ ಬಾವಿಗಳ ಮೋಟರ್ ಪಂಪ್‌ಗಳು ಪ್ಯಾನೆಲ್ ಬೋರ್ಡ್‌ಗಳು, ನೀರು ಸರಬರಾಜು ಕೊಳವೆಸಾಲುಗಳು ಪ್ರತಿದಿನ ದುರಸ್ತಿಯಾಗುತ್ತಿದ್ದು, ಇವುಗಳನ್ನು ದುರಸ್ಥಿ ಮಾಡಿ ನೀರು ಸರಬರಾಜುಗಾರರಿಗೆ (ವಾಟರ್‌ಮೆನ್) ಹೊರಗುತ್ತಿಗೆದಾರರಿಂದ ವೇತನ ಪಾವತಿಸಿ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿರುವುದರಿಂದ 2022-23ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 05-220801 ದುರಸ್ಥಿ ಮತ್ತು ನಿರ್ವಹನೆ - ಒಳಚರಂಡಿ ಮತ್ತು ನೀರು ಸರಬರಾಜು ಆಸ್ತಿಗಳು (ಅನುಸೂಚಿ ಸಂಖ್ಯೆ-ಎ-05-17) ಅದರಡಿ ನೀರು ಸರಬರಾಜು ವಾರ್ಷಿಕ ನಿರ್ವಹಣೆ ಮತ್ತು ದುರಸ್ಥಿ (ನಾಗರಿಕರ ಬೇಡಿಕೆ ಮೇರೆಗೆ) ಪಿ-1802 ರಡಿ ರೂ: 6500.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಿದ್ದು, ಈ ಅನುದಾನದಲ್ಲಿ ವಾರ್ಷಿಕವಾಗಿ ಮೋಟರ್ ಪಂಪ್ ದುರಸ್ಥಿ ಮಾಡಲು ರೂ.50.00ಲಕ್ಷಗಳು ಹಾಗೂ ನೀರು ಸರಬರಾಜುದಾರರಿಗೆ ಹೊರಗುತ್ತಿಗೆದಾರರಾದ ವಿವಿಧ ಏಜೆನ್ಸಿಗಳ ವತಿಯಿಂದ ವೇತನ ಪಾವತಿಸಲು ರೂ.30.00 ಲಕ್ಷಗಳ ಅವಶ್ಯಕತೆಯಿದ್ದು, ಅಂದಾಜು ಪಟ್ಟಿಗೆ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ಮಾನ್ಯ ವಲಯ ಆಯುಕ್ತರಿಗೆ ಸಲ್ಲಿಸಲು ಸಭೆಯಲ್ಲಿ ಕೋರಲಾಗಿ ಸಭೆಯು ಈ ನಡವಳಿಗೆ ಸರ್ವಾನುಮತದಿಂದ ಒಪ್ಪಿಗೆ ನೀಡಿದೆ.
- ಹೊಸ ವಾರ್ಡ್ ಸಂಖ್ಯೆ-81 ಹೊರಮಾವು ವಾರ್ಡ್ ವ್ಯಾಪ್ತಿಗೆ ಬರುವ ಭಾಗಶಃ ಹೊರಮಾವು ಗ್ರಾಮ ಹೊರಮಾವು ಅಗರ ಗ್ರಾಮ, ಗೆದ್ದಲಹಳ್ಳಿ ಗ್ರಾಮ, ಕೆ.ನಾರಾಯಣಪುರ ಗ್ರಾಮ, ಕೊತ್ತನೂರು ಗ್ರಾಮ, ನಗರೇಶ್ವರ ನಾಗೇನಹಳ್ಳಿ ಗ್ರಾಮ, ಕ್ಯಾಲಸನಹಳ್ಳಿ ಗ್ರಾಮ ವ್ಯಾಪ್ತಿಗೆ ಬರುವ ಹಳ್ಳಿಗಳು ಹಾಗೂ ಬಡಾವಣೆಗಳ ವ್ಯಾಪ್ತಿಯಲ್ಲಿ ನೀರು ಸರಬರಾಜು ನಿರ್ವಹಣೆಯನ್ನು ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿದ್ದು, ನಿರ್ವಹಣಾ ಅವಧಿಯು 30.06.2022 ಕ್ಕೆ ಮುಕ್ತಾಯಗೊಂಡಿದ್ದು, ಹಾಲಿ ಕೊಳವೆ ಬಾವಿಗಳ

ಮೋಟರ್ ಪಂಪ್‌ಗಳು ವ್ಯಾಲ್ ಬೋರ್ಡ್‌ಗಳು, ನೀರು ಸರಬರಾಜು ಕೊಳವೆಮಾರ್ಗಗಳು ಪ್ರತಿದಿನ ದುರಸ್ತಿಯಾಗುತ್ತಿದ್ದು, ಇವುಗಳನ್ನು ದುರಸ್ಥಿ ಮಾಡಿ ನೀರು ಸರಬರಾಜುಗಾರರಿಗೆ (ವಾಟರ್‌ಮೆನ್) ಹೊರಗುತ್ತಿಗೆದಾರರಿಂದ ವೇತನ ಪಾವತಿ, ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿರುವುದರಿಂದ 2022-23ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 05-220801 ದುರಸ್ಥಿ ಮತ್ತು ನಿರ್ವಹಣೆ –ಒಳಚರಂಡಿ ಮತ್ತು ನೀರು ಸರಬರಾಜು ಆಸ್ತಿಗಳು (ಅನುಸೂಚಿ ಸಂಖ್ಯೆ-ಎ-05-17) ಆದರಡಿ ನೀರು ಸರಬರಾಜು ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ (ನಾಗರಿಕರ ಬೇಡಿಕೆ ಮೇರೆಗೆ) ಪಿ-1802 ರಡಿ ರೂ: 6500.00 ಲಕ್ಷಗಳ ಅನುದಾನವನ್ನು ಕಾಯ್ದಿರಿಸಿದ್ದು ಈ ಅನುದಾನದಲ್ಲಿ ವಾರ್ಷಿಕವಾಗಿ, ಮೋಟರ್ ಪಂಪ್ ದುರಸ್ಥಿ ಮಾಡಲು ರೂ.30.00ಲಕ್ಷಗಳು ಹಾಗೂ ನೀರು ಸರಬರಾಜುದಾರರಿಗೆ ಹೊರಗುತ್ತಿಗೆದಾರರ ವಿಶೇಷ 0ಏಜೆನ್ಸಿಗಳ ವತಿಯಿಂದ ವೇತನ ಪಾವತಿಸಲು ರೂ.30.00 ಲಕ್ಷಗಳ ಅವಶ್ಯಕತೆಯಿದ್ದು, ಅಂದಾಜು ಪಟ್ಟಿಗೆ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ಮಾನ್ಯ ವಲಯ ಆಯುಕ್ತರಿಗೆ ಸಲ್ಲಿಸಲು ಸಭೆಯಲ್ಲಿ ಕೋರಲಾಗಿ ಸಭೆಯು ಈ ನಡವಳಿಗೆ ಸರ್ವಾನುಮತದಿಂದ ಒಪ್ಪಿಗೆ ನೀಡಿದೆ.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ಸುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

(signature) 16/7
ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(signature)
ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ಸಂಖ್ಯೆ-25
ಬಿ.ಬಿ.ಎಂ.ಪಿ.